ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ಕುಸ:02:ದೂಶಿನಿ:17:ಗೋಚಾ:ಮಾಸೂ:2022–23 ದಿನಾಂಕ:15.09.2022

# ಸೂಚನಾ ಪತ್ರ

ವಿಷಯ : 2022–23ನೇ ಸಾಲಿನ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಕಾರ್ಯಕ್ರಮಗಳು ಮತ್ತು ಸುವರ್ಣವಕಾಶ(GOLDEN CHANCE)ದ ಮಾರ್ಗಸೂಚಿ ಅನುಸರಿಸುವ ಕುರಿತು.

ಉಲ್ಲೇಖ :
1. ಯುಜಿಸಿ ಅಧಿಸೂಚನೆ ಸಂಖ್ಯೆ: F.N.74–8/2017(DEB-IV), ದಿ:28.07.2017
2. ದೂರಶಿಕ್ಷಣ ನಿರ್ದೇಶನಾಲಯ ನಿಯಮಾವಳಿ
3. ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಸಂಖ್ಯೆ:ಕವಿಹಂ:ಕುಸ:ದೂಶಿನಿ:17:ಶೈವೇಅ:2022–23 ದಿ:13.06.2022
4. ದಿ:17.08.2022ರಂದು ನಡೆದ 21ನೇ ಉನ್ನತ ಸಲಹಾ ಸಮಿತಿ ಸಭೆಯ ನಿರ್ಣಯ 05
5. ದಿ:07.09.2022ರಂದು ನಡೆದ 214ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ 04
6. ಸಂಪರ್ಕ ತರಗತಿಗಳ (2022–23) ಅನುಮೋದನೆ ಕಡತದ ಕಂಡಿಕೆ 05, ದಿ:15.09.2022ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ
7. ಸಂಖ್ಯೆ:ಕವಿಹಂ:ಕುಸ:ದೂಶಿನಿ:17:ಶೈವೇಅ:2022–23, ಸೆಪ್ಟಂಬರ್ 15, 2022

* * *

ಉಲ್ಲೇಖ 01 ಮತ್ತು 02ಕ್ಕೆ ಸಂಬಂಧಿಸಿದಂತೆ ಈಗಾಗಲೆ ಉಲ್ಲೇಖ 03ರಲ್ಲಿ 2022–23ನೇ ಶೈಕ್ಷಣಿಕ ಸಾಲಿನ ವಾರ್ಷಿಕ ವೇಳಾಪಟ್ಟಿಯನ್ನು ಹೊರಡಿಸಲಾಗಿತ್ತು. ಉಲ್ಲೇಖ 04ರ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಸಮಿತಿ ಸಭೆ, ಉಲ್ಲೇಖ 05ರ 214ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ದೂರಶಿಕ್ಷಣ ನಿರ್ದೇಶನಾಲಯದಲ್ಲಿ 2009–2010 ರಿಂದ 2016–2017ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ(Re Exam) ಮತ್ತು ಅಂಕಗಳ ಉತಮೀಕರಣ(Improvement) ಮಾಡಿಕೊಳ್ಳಲು ಬಯಸುವ ಹಾಗೂ ಸಂಪರ್ಕ ತರಗತಿ(Contact Programes)ಗಳಿಗೆ ಹಾಜರಾಗೆ ಬಯಸುವ ವಿದ್ಯಾರ್ಥಿಗಳಿಗೆ ಸುವರ್ಣವಕಾಶ(GOLDEN CHANCE)ವನ್ನು ನೀಡಲು ನಿರ್ಣಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸಮಿತಿಗಳು ಹಾಗೂ ಉಲ್ಲೇಖ 06ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಉಲ್ಲೇಖ 07ರಲ್ಲಿ ಪರಿಷ್ಕೃತ ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಹೊರಡಿಲಾಗಿದೆ.

ದೂರಶಿಕ್ಷಣ ನಿರ್ದೇಶನಾಲಯದಿಂದ ಮಾನ್ಯತೆ ಪಡೆದಿರುವ ಅಧ್ಯಯನ ಕೇಂದ್ರಗಳು, ಸಮನ್ವಯ ಘಟಕಗಳು ಹಾಗೂ ವಿಸ್ತರಣಾ ಕೇಂದ್ರಗಳು ಸುವರ್ಣವಕಾಶ(GOLDEN CHANCE)ದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಲಾಗಿದೆ.

2017–18 ರಿಂದ 2019–20ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೂ ಏಕಕಾಲದಲ್ಲಿ ಸಂಪರ್ಕ ತರಗತಿಗಳು ಮತ್ತು ಪರೀಕ್ಷೆಗಳು ನಡೆಯಲಿವೆ.

2017–18 ರಿಂದ 2019–20ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಇದು ಕೊನೆಯ ಅವಕಾಶವಾಗಿರುತ್ತದೆ.

ಕನ್ನಡ ವಿಶ್ವವಿದ್ಯಾಲಯ ಮತು ಮಾನ್ಯತಾ ಕೇಂದ್ರಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಸಂಪರ್ಕ ತರಗತಿಗಳು ಮತ್ತು ಪರೀಕ್ಷೆಗಳು ನಡೆಯಲಿವೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯವು ಹೊರಡಿಸಿರುವ ಮಾರ್ಗಸೂಚಿ ಮತ್ತು ಇತರೆ ಸೂಚನೆಗಳನ್ನು ಅನುಸರಿಸಿ ವಿದ್ಯಾರ್ಥಿಗಳಿಗೆ ಈ ಸೌಲಭ್ಯಗಳನ್ನು ಸುದುಪಯೋಗಪಡಿಸಿಕೊಳ್ಳಲು ಸೂಚಿಸಬೇಕಾಗಿ ಕೋರಲಾಗಿದೆ.

ಸಂಪರ್ಕ ತರಗತಿ, ಶೈಕ್ಷಣಿಕ ವೇಳಾಪಟ್ಟಿ, ಮಾರ್ಗಸೂಚಿ, ಸೂಚನೆಗಳು, ನಮೂನೆಗಳು ಮತ್ತು ಇತರೆ ಮಾಹಿತಿಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಅಧಿಕೃತ ವೆಬ್‌ಸೈಟ್ www.kannadauniversity.org.ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರಶಿಕ್ಷಣ ನಿರ್ದೇಶನಾಲಯದ ಮೊಬೈಲ್ ಸಂಖ್ಯೆ 8792219968ಗೆ ಸಂಪರ್ಕಿಸಬಹುದು.

ವಂದನೆಗಳೊಂಗೆ

16/9/22
ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ

ಇವರಿಗೆ
1. ಮುಖ್ಯಸ್ಥರು, ಕನ್ನಡ ವಿಶ್ವವಿದ್ಯಾಲಯದ, ದೂಶಿನಿಯ ವಿಸ್ತರಣಾ ಕೇಂದ್ರಗಳು
2. ಮುಖ್ಯಸ್ಥರು, ಕನ್ನಡ ವಿಶ್ವವಿದ್ಯಾಲಯದ, ದೂಶಿನಿಯ ಮಾನ್ಯತಾ ಕೇಂದ್ರಗಳು
3. ಮುಖ್ಯಸ್ಥರು, ಕನ್ನಡ ವಿಶ್ವವಿದ್ಯಾಲಯದ, ದೂಶಿನಿಯ ಸಮನ್ವಯ ಘಟಕಗಳು